ಕ. ಪ. 185

# ವೀರವಿಲಸಿತ



ತೆಕ್ಕುಂಜ ಗೋಪಾಲಕೃಷ್ಣ ಭಟ್ಟ.

ಹರಪವಾಳೇಗಾರಿ

ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡರಿಗೆ
ಒಲವಿನ ಕಾಣಿಕೆ
– ಗೋಪಾಲಕೃಷ್ಣ ಭಟ್ಟ
16·4·50.

# ವೀರವಿಲಸಿತ

ತೆಕ್ಕುಂಜ ಗೋಪಾಲಕೃಷ್ಣ ಭಟ್ಟ

1950

ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್, ಲಿಮಿಟೆಡ್, ಮಂಗಳೂರು

# ಮೂರು ಮಾತು

ಇದು ನನ್ನ ಮೊದಲ ಪುಸ್ತಕ; ತಪ್ಪುಗಳಿರಬಹುದು; ಮನ್ನಿಸುವುದು ಮಾನ್ಯರ ಸಹಜಗುಣ; ತಿದ್ದುವುದು ವಿದ್ವಾಂಸರ ಲಕ್ಷಣ.

ಇದರ ಛಂದಸ್ಸು ಹಳೆಯದು; ಪಾತ್ರಗಳು ಹಳೆಯವು; ಕಲ್ಪನೆ ಹೊಸತು; ಕವಿತೆ ಹೊಸತು.

ಇದನ್ನು ಓದಿ, ಓದಿಸಿ, ಕೇಳಿ ಬೆನ್ನುತಟ್ಟಿದವರು ಗೆಳೆಯರು. ಮುದ್ರಿಸಿದವರು ಉದಯ ಪ್ರಿಂಟರ್ಸ್ ಎಂಡ್ ಪಬ್ಲಿಕೇಶನ್ಸ್, ಲಿಮಿಟೆಡ್, ಮಂಗಳೂರು, ಇವರು. ಈ ಎಲ್ಲರಿಗೆ ನಾನು ಋಣಿ.

**ತೆಕ್ಕುಂಜ ಗೋಪಾಲಕೃಷ್ಣ ಭಟ್ಟ.**

ಕೋಗಿಲೆಯಾಗಿ ನನ್ನಲ್ಲಿ ಕನ್ನಡಪ್ರೇಮವನ್ನು ಹುಟ್ಟಿಸಿ
ಪಂಡಿತವಕ್ಕಿಯಾಗಿ ಅದನ್ನು ಬೆಳೆಯಿಸಿ,
ಹರಕೆಯ ನೀರೆರೆದು ಕೊನರಿಸಿದ,

ದಿವಂಗತ **ಪಂಡಿತ ಮುಳಿಯದ ತಿಮ್ಮಪ್ಪಯ್ಯನವರ**

ದಿವ್ಯಚರಣಗಳಲ್ಲಿ

ಈ

**ಪುಷ್ಪಾಂಜಲಿ**

# ವೀರವಿಲಸಿತ

(ಪಿರಿಯಕ್ಕರ)

೧

ಕೋಸಲೇಶಶ್ರೀರಾಮನಸಗನಾಡಿ--
ದೊಂದಪವಾದನಿಮಿತ್ತವಾಗಿ
ಪೂತೆ ಸೀತೆಯನಡವಿಗಟ್ಟಿದ ಬಳಿ-
ಕಿದ್ದನು ದುಗುಡದ ಸಿಡಿಲೆರಗಿ
ಕುಂಭಸಂಭವ ಬಂದಶ್ವಮೇಧದಿ
ಬ್ರಹ್ಮಹತ್ಯಾಪಾಪಧ್ವಾಂತವೆಲ್ಲ
ಮಾಯವಾಗುತ್ತ ಭಾಗ್ಯಾರ್ಕ ಮೂಡುವ--
ನೈದುವುದಂದಿಗೆ ಹೂನ್ಯಗೆಲ್ಲ

೨

ಎಂದ ಬೋಧೆಯನಾನುತ್ತ ಮುಖದೀಕ್ಷೆ-
ಗೊಂಡನು ಶತ್ರುಘ್ನನನು ಹಯದ
ಬೆನ್ನ ಕಾವಲನಪ್ಪಂತೆ ಬೆಸಸುತ್ತ
ಕಳುಹಿದನೊಡಗೊಂಡರಾ ಬೀರದ
ಬಿತ್ತುಗಳು ಚಂದ್ರಕೇತುಭಾರತಿಗಳು
ಲಕ್ಷ್ಮಣಭರತರ ಕಿರುಮಕ್ಕಳು
ಬಿಂಕ-ಪೊಂಕದೊಳುಲ್ಲಾಸದುತ್ಸವ-
ದುಕ್ಕಂದಗಳು ತೇಜವೆಡೆಗೊಳಲು

೩

ದೇಶದೇಶದ ಮಲೆವರಿರಾಜರ
ತಲೆಯಲ್ಲಿ ಕಾಲಿಟ್ಟು ಕುಣಿಯುತ್ತಲಿ
ಶರಣು ಶರಣೆಂಬ ಭೂಪರ ಕರಗಳ
ಶಿರದಲ್ಲಿ ಹೊರೆಗಟ್ಟಿ ನಲಿಯುತ್ತಲಿ
ಮುಂಮುಮುಂದಕ್ಕೆ ಧೀಂಕಿಟ್ಟು ಹಯಗತಿ-
ಯನು ಬಿಡದೆಯ್ದಿದ ಸೇನೆಯದೋ
ಸನ್ನಿಹಿತವಾಯ್ತು ಕಾಡೊಂದದಲ್ಲಿರ್ದ
ಶ್ವಾಪದ ಕುದುರೆಯ ನುಂಗಿದುದೋ

೪

ಸುತ್ತಲರಸುವ ಚತುರಂಗಸೈನ್ಯವು
ಚದುರಂಗದಾಟದ ಗುರುಗಳಂತೆ
ಮುಂದೆ ನಡೆಯಿತು ಹಯಪದಚಿಹ್ನೆಯು
ಕಾಣದು ತರಗೆಲೆಗಳ ಕಂತೆ
ತುಂಬಿದಡವಿಯ ಹೊಕ್ಕಂದು ಕತ್ತಲೆ
ಮುತ್ತಿತು ಪರಸೈನ್ಯ ಕವಿಯುವಂತೆ
ಕಣ್ಣ ಕೆರಳಿಸಿ ಕೈಗುತ್ತಿ ಕಾಲೊತ್ತಿ
ನಡೆಯಿತು ವಾಹಿನಿ ಕಾದುವಂತೆ

೫

ಮಧ್ಯವನದಲ್ಲಿ ತಳಿರಿನ ಹಂದರ
ಸಮೆದಂತೆ ಚಿಣ್ಣರ ನೆರವಿಯೊಂದು
ಕೂಡಿ ಕುದುರೆಯನೇರುವ ಬಿನದದಿ–
ನಾಡುವ ಬಾಲರ ನೋಡಲೆಂದು
ಭಾನು ಬಾನಲಿ ಬಾವಲಿಯಾದನು
ಕೀಳ್ಮೊಗವಾದರೆ ಸೊಗವಿರದೇ
ಆಟದಲಿ ಸೊಗಗಾಣಲು ಮೇಲ್ಮೊಗ–
ನಾಗಲು ಸಂಸಿದ್ಧಿ ದೊರೆಯುವುದೇ

೬

ಸಂಜೆವೆಳಗಿನ ಹೊಂಬಣ್ಣ ಮಕ್ಕಳ
ಮೊಗಬೈಗುಮಲ್ಲಿಗೆಯರಳಿಸಲು
ಕಾಡ ಮರಗಳು ಹಕ್ಕಿಹಾಡಿನ ರೂಪ–
ದಿಂದ ಮಂಗಳಗೀತವನು ಹಾಡಲು
ಥಕ್ಕಥೈಯೆಂದು ನೆಗೆದು ಕುಪ್ಪಳಿಸುತ್ತ
ಬೊಬ್ಬಿಟ್ಟು ಕುಣಿದರು ಪರಿಪರಿಯ
ಕ್ರೀಡೆಗಳ ರಸಸೂಸಿ ತೋಷದ ವಲ್ಲ–
ರಿಯ ಕೊನರಿಸಿ ಮುಗುಳಿಸಿ ನಗೆಯ

೭

ಏನೋ ಪಟಪಟ ಸದ್ದೊಂದು ಕಿವಿಯನ್ನು
ಸೆಳೆಯಿತು ಮಕ್ಕಳ ಕೈ ಕಿವಿಯ
ತಾಣವನು ಹಿಡಿದತ್ತು ಕಣ್ಣಿನ ರೆಪ್ಪೆ
ಯನ್ನರೆಯಾಗಿಸಿ ಕುರುಳೋಳಿಯ
ಹಿಂದೆ ಸರಿಯಿಸಿ ಬಾಯ್ಬಿಟ್ಟು ಕೆಲಬಲ-
ಗಳ ನೋಡುವಂದದಿ ಮಾಡಿದುದು
ಚಿಕ್ಕ ಮಕ್ಕಳ ಸ್ಥಿತಿಯಿಂತು ಬಹುಕಾಲ
ಬಾಳದು ಹೊಸಸೊಗ ರೂಢಿಪುದು

೮

ದೂರದಿಂದೊಂದು ಕುದುರೆಯು ನೆಗೆನೆಗೆ-
ದಾಡುತ್ತ ಬರುತಿದೆ ಸಮ್ಮುಖಕೆ
ಪಾರ್ಶ್ವದಲಿ ಸಿರಿಮೊಗದ ಸುಂದರನೆಳೆ-
ವನು ಕಟ್ಟಿದಾಬಳ್ಳಿ ಕುತ್ತಿಗೆಗೆ
ಹೊಚ್ಚ ಹೊಸತಾದ ತವಕದ ನೋಟದಿ
ಕಣ್ಣರಳಿತು ಬಾಲರುತ್ಸಾಹದಿ
“ಬೇಗ ಬಾ ಲವ ಕುದುರೆಯನೇರೋಣ
ಕುಣಿಯೋಣ” ಎಂದರು ಸಮ್ಮುದದಿ

೯

ತಾವರೆಯ ಮುಗುಳಿನ ಕಾಡ ಸಪ್ತಾಶ್ವ-
ನರಳಿಸುವಂದದಿ ಬನದ ಬಾಲ-
ವೃಂದವಾನಂದದಿಂದೊಂದು ತುರಗವ
ತರೆ ಲವನಾಡಿತು ಕೋಲಾಹಲ
ಹೆಚ್ಚಿ ಹರಡಿತು ಸನಿಯಕ್ಕೆ ಬರೆ ಹಯ-
ದಂಗಸೌಂದರ್ಯವ ಪರಿಕಿಸಿತು
ಮೇಲೆ ಹಣೆಯಲ್ಲಿ ಬರೆದೊಂದು ಪೊಂಬಟ್ಟ-
ವನು ಕಂಡು ಮಕ್ಕಳೊಡ್ಡ ದನೋದಿತು

೧೦

“ವೀರಪಾರ್ಥಿವರೆರೆಯ ರಾಮನ ಹಯ-
ವಿದನದಟುಳ್ಳವ ಬಂಧಿಸಲಿ
ಸಾರ್ವಭೌಮನ ಪೆಂಪೊಪ್ಪುಗೊಳುವವ
ತಲೆಹೂವನಾದೇವಗೊಪ್ಪಿಸಲಿ”
“ಏನು ಸೊಕ್ಕಿನ ಹೆಗ್ಗಳಿಕೆಯ ಮಾತು
ಹೂದಲೆಯನು ಬಗ್ಗಿಪಾರಡಿಯೋ
ಪುಷ್ಪಸೌರಭ ಮೂಗನೇರುತ ನಾಟ್ಯ-
ವಾಡದೆ ಬಿಡುವುದೆ ಹೆಂಬೇಡಿಯೋ

೧೧

“ನಾಡಿನೊಡೆತನ ಸೂರ್ಯವಂಶದ ರಾಜ-
ಗೊದಗಿರೆ ಕಾಡಿನ ಸಿಂಹಶಿಶು
ಓಡಿಬಿಡುವುದೆ ವನರಾಜ್ಯದಧಿಕಾರ
ಕಳೆವುದೆ ಭಯದಿಂದ ವೀರಪಶು
ಇಲ್ಲಿ ಸರ್ವೋಜ ವಾಲ್ಮೀಕಿ ನರ್ಮದೆ
ಯಲ್ಲಿ ತುಂಬಿದ ತೇಜ ನಾಲಗೆಯ
ಬೆಳಗಿ ಕರಗಳ ನೀಡಿಸೆ ತಡೆಯುವ
ಬಲ್ಲಾಳು ಬರಲಿತ್ತ ಬಿಡೆ ಹರಿಯ”

೧೨

ವೀರವಿಲಸಿತ ಬಲ್ಲುಲಿವೆಳಗನು
ಪಸರಿಸಿ ಬಲ್ಲಣೆ ಮುಂಬರಿಯೆ
ಸ್ವಾಗತನ ಬಯಸಿತು ಮುಂದೆ ನಿಂದರು
ತುಳಿಲಾಳು ಪಟುಭಟರೊಡೆದುಳಿಯೆ
ಸಾರವಂತರು ಬಿಲ್ಲಂಬುಗಳ ರುದ್ರ-
ರೂಪರು ರಣಕೇಳಿಯಾಡುವೊಡೆ
ಶತ್ರುರೂಪರ ಕಂಡಾಗ ಮುರುಟಿತು
ಲವಣಾರಿಗೆದೆ ಬಂತು ಕೆಯ್ಗೆ ತಡೆ

೧೩

ಮೆಲ್ಲನಾತನ ಬಾಯಿಂದ ಮಾತೊಂದು
ಜಗುಳಿತು "ನೀವಾರು" ಪಡಿನುಡಿಗೆ
ಕರ್ಣ ಬಾಯ್ದೆರೆದಾಸೆವಡುತಲಿತ್ತು
ಬಲ್ಸಿಡಿಲೆರಗಿತು ಕಿವಿಗಡ್ಡೆಗೆ
"ಏಕೆ ನಾವಾರೊ ನೀವಾರೊ ನೂರಾರೊ
ಲೆಕ್ಕದ ಪಾಠವ ಕಲಿಸಲಿಕೆ
ನೀವು ಬಂದುದೆ ತೆರಳಿರಿ ಸಾಕಿಲ್ಲಿ
ನಾಟಕ ವೇಷದ ಹೆಗ್ಗಳಿಕೆ"

೧೪

"ಸೂರ್ಯತೇಜವನಡ್ಡೈಸುವೆಳೆವೋಷ
ವಾಗದಿರಶ್ವವ ಬಿಟ್ಟುಬಿಡಿ"
"ಕಟ್ಟುವುದ ಬಲ್ಲ ಕೈ ಬಿಟ್ಟುಕೊಡುವುದೆ"
"ಹೋರಾಡಿ ತಲೆಯನ್ನು ಮಾರುಗೊಡಿ"
"ಹೋರಿಯನು ಕೆರಳಿಸೆ ಗೋರುಮಣ್ಣಿಗೆ
ಬಂದಿತೆ ಈ ಪರಿ ದಿಟ್ಟತನ"
"ಮಣ್ಣರಾಶಿಯಿದಲ್ಲ ಪೇರರೆಗಳ
ಗುಡ್ಡವು" "ನೋಡೋಣ ತೊಡಗಿ ರಣ"

೧೫

ಅಬ್ಬರದ ಬಿರುಮಾತು ಮಾತಿನ ಮೊನೆ
ಮೊನೆಯನ್ನು ರೂಪಿಸಿ ಹಗರಣವ
ಮಾಡೆ ನೇಸರ ಹೊಂಗದಿರಿಗೆ ಸಂಜೆ
ತೆರೆಮುರೆಯಿಕ್ಕಿತು ಕಾಳಗವ
ಮಾರನೆಯ ದಿನಕಿಟ್ಟಿತು ಕೊಟ್ಟಿತು
ಸೇನೆಗೆ ಬಾಲರ್ಗೆ ವಿಶ್ರಾಂತಿಯ
ಸೀತೆಗಿದರರಿವಿರಲಿಲ್ಲ ಲವಕುಶ–
ರಾಡಥೆ ನಡೆದಿರ್ದ ಕತೆಹಿಡಿಯ

೧೬

ಮೂಡುಬಾನಸಲಿ ಬೆಳ್ಳಿ ಮೂಡಲು ಕಾಡಿ-
ನಲಿ ಹಕ್ಕಿಗಳು ಕಾಳಗದ ಕಹಳೆ
ಊದಿ ಕರೆದೊಡೆ ಲವಕುಶರೊಂದೆಡೆ
ನಿಂದರು ಧನುಶರ ಕರದೊಳಾಳೆ
ಸಮ್ಮುಖಕೆ ಬಂದನೆಳೆಯ ವೀರನು ಚಂದ್ರ-
ಕೇತು ಕಾದಲು ಕಡುಸಿಡುಕಿನಿಂದ
ಬಿಲ್ಲುಗಾರಿಕೆಯಲಿ ಚತುರತೆಯನು
ತೋರುವ ಜೈಸುವ ಹುರುಪಿನಿಂದ

೧೭

ಕಣ್ಣು ತಿಳಿಯದ ಸೋದರಿಕೆಯು ಕರು-
ಳರಿವುದು ಚಂದ್ರಧ್ವಜನ ಮನವು
ಮಕ್ಕಳಾಟದ ಸಲುಗೆಯು ಬಯಸಿತು
ಸುರಿಸಿತು ನಾಲಗೆ ಮನದೊಲವು
“ಸೋದರರೆ ನಿಮ್ಮೊಳೇರಾಟದಾಸೆ ಹಿ-
ಮ್ಮೆಟ್ಟಿತು ಕಾರಣವೇತರದೊ
ಅಂಬನೆಸೆಯುವ ಕೈಗಳು ಮುನ್ನುಗ್ಗು-
ತಾಶ್ಲೇಷಕೆಳಸುವವೇತಕಿದೊ”

೧೮

“ಕ್ಷಾತ್ರತೇಜದ ಬೇಗೆಯನಾನುವ
ಧೈರ್ಯವ ಕಳೆದಿಂತು ನುಡಿಯುವೆಯು”
“ಹೇಡಿತನವಲ್ಲ ಹೃದಯದಿ ಮೂಡುವ
ಪ್ರೇಮದ ಪುಷ್ಪವನುಡಿಯುವೆಯು”
“ಅಗ್ನಿಕಣಗಳ ನಂದಿಸಲುಕ್ಕುವ
ನೀರ್ಮಾತು ಕವಡೆದೆಯಿಂ ಸುರಿಯೆ
ಮೆಚ್ಚಿ ನೆಯ್ಯೆಂದು ಸವಿವೆವು ಪಟುಭಟ-
ರಿಂಧನವಾಹುತಿಗೊಳ್ಳಲಿಕೆ”

೧೯

"ಮೃತ್ಯುವಿನ ತಳ್ಕೆಗಂಜುವ ಕುಲದಲ್ಲಿ
ಹುಟ್ಟಿಲ್ಲ ವೃಕ್ಷದ ರೆಂಬೆಗಳು
ತೀಡುವೆಲರಿಂದ ತಿಕ್ಕಾಡಿ ಬೆಂಕಿಗೆ
ಬಲಿಯಪ್ಪುದವನಿಯು ನೆರೆ ನಗಲು"
"ಒಂದೆ ಮರದಿಂದ ಕವಲಾದ ಕೊಂಬೆಗ-
ಳಾವೆಂಬ ಕಲ್ಪನೆಗೆಡೆಯಾವುದು"
"ಸಜ್ಜನರ ಚಿತ್ತಸಂದೇಹಪದದಲ್ಲಿ
ಸಿದ್ಧಾಂತವೆದೆಯೊಲವೆನ್ನುವುದು"

೨೦

ಇಂತು ಬಗೆವಗೆ ಮಾತಿನಸ್ತ್ರಗಳಿಂದ
ಲವಕುಶರೆಚ್ಚಾಡೆ ಬಿರುಸಿನಿಂದ
ಚಂದ್ರಕೇತುವಿನೊಲವಿನಸ್ತ್ರಣವಡ್ಡ-
ಯಿಸಿ ನಿಂದುದತಿಶಯಸಹನೆಯಿಂದ
ಮೈತ್ರಿ ಸಾಪ್ತಪದೀನವೆಂಬುದು ಸಿದ್ಧ-
ವಾದುದು ಬಾಲರ ಕೃತ್ಯದಲಿ
ಮೆಲ್ಲಮೆಲ್ಲನೆ ಸೀತಾಸುತರ ಮನ-
ಮುಕುಳವು ಬಿರಿದುದು ನೀರಿನಲಿ

೨೧

ಅಂತರಂಗದ ನೇಹವ ಹೊರಚೆಲ್ಲಿ
ಮರುವಕ್ಕದುರಿಯೇರಿ ದಹಿಸಿದರೆ
ದಿವ್ಯತೇಜವ ಪಸರಿಪ ದೀವಿಗೆ-
ಯಾರಿದಂತಪ್ಪುದು ಬೇಡ ಕರೆ
ಎಂಬ ಭಾವದಿ ಕುಶನುಸುರಿದನಿಂತು
"ತಿಳಿವಿನ ಮುದ್ದೆಯೆ ನೀನಾಗಿರು
ಹಾರುಮಾತಿನುರುಳುಗಣ್ಣಿಗೊಳಗಪ್ಪ
ಮೃಗವೆಂದು ನಮ್ಮನು ಬಗೆಯದಿರು"

೨೨

"ಶೀಲವೊಂದಾಗೆ ಗೆಳೆತನವೊಂದುಗು-
ಮಂತೆಯೆ ನೀವಿಂದು ವಿಪ್ರಕುಲ-
ದಲ್ಲಿ ಹುಟ್ಟಿದ್ದು ಬೀರಸಿರಿಯ ತೋರೆ
ಮೂಡುವುದೈ ಮಮತೆಯು ನಿಶ್ಚಲ"
ಮಾತು ಕಿವಿಯೊಳಗಮರುವ ಮುನ್ನವೆ
ನಗುವಿನ ತೆರೆಯೆದ್ದು ನೆಗೆನೆಗೆಯೆ
ಮಾರುನುಡಿದನು ಲವ "ನಿನ್ನ ತಿಳಿವಿನ
ಮುದ್ದೆಯು ಹಳಸಿದೆ ನೀನರಿಯೆ"

೨೩

"ಏಕೆ ಭಾನುವಿನನ್ವಯದಲಿ ಹುಟ್ಟು
ಲಕ್ಷ್ಮಣೋರ್ಮಿಳೆಯರು ಹೆತ್ತವರು
ಚಕ್ರವರ್ತಿ ರಾಘವನೆಮ್ಮ ಹಿರಿಯಯ್ಯ
ಪೂಜ್ಯವಸಿಷ್ಠರೆ ಶಿಕ್ಷಾಗುರು
ಪೆರ್ಮೆಯಿಂತಿರೆ ನೀಕರಿಸುವ ಧಾರ್ಷ್ಟ್ಯ
ಬಂದಿತೆ ನಾಲಗೆ ಕುಲವರಿವ
ದಾರಿ ಮಾಳ್ಪುದು ನಿಜವೆಂಬರಂತೆಯೆ
ಹಳಿಯುವಿರೆನ್ನಯ ಬಿಳಿತಿಳಿವ"

೨೪

"ನಮ್ಮ ಬುಡವರಿಯದೆ ಕಂಡ ಬಟ್ಟೆಯ
ನುಡಿಯಾಡೆ ಮೌಢ್ಯವು ನಿನಗೊಂದಿತು
ಮೇಲೆ ನಮ್ಮನು ಕುಲವೆತ್ತಿ ಕೆಣಕುವ
ದುರ್ಬುದ್ಧಿ ನಿನ್ನನು ಸೆರೆಗೊಂಡಿತು
ಸೂರ್ಯವಂಶದಿ ಜನ್ಮವು ನಮ್ಮದು
ವಿದ್ಯೆಗೆ ವಾಲ್ಮೀಕಿ ನಮ್ಮ ಗುರು
ಪೂತೆ ಸೀತೆಯೆ ಹೆತ್ತಬ್ಬೆಯೆನಲೇಕೆ
ಚುಚ್ಚುವೆ ಮುಂದಿನ್ನು ನುಡಿಯದಿರು"

೨೪

ಅಚ್ಚರಿಯ ಪೊಸಸುದ್ದಿಯು ತಿಳಿದಂಗೆ
ನಡುವಿರುಳಾದಿತ್ಯ ಮೂಡಿದಂತೆ
ಹರ್ಷವುಕ್ಕಿತುಕ್ಕಿತು ಮಾತು "ಶ್ರೀರಾಮ
ಪುತ್ರರಿ ಗೆಲವಾಯ್ತು ಕಳೆಯಿರಂತೆ
ದ್ವೇಷವನು ರಾಮಸೋದರಲಕ್ಷ್ಮಣ
ಸುತನಾನು ಶಶಿಕೇತು ನಾಮಧೇಯ
ನಿಮ್ಮ ಸೊಬಗುಗುವಾಸ್ಯದ ಮೊನೆಮಾತಿ
ನುರಿ ಕಂಡೆ ಬಂದಿತು ಭಾಗಧೇಯ"

೨೬

"ರಾಮದೇವರ ಮಕ್ಕಳೆ ತಿಳಿದಿಲ್ಲ
ಮಾತೆಯೇತಕೆ ತಿಳಿಸಿರಲಿಲ್ಲವೊ
ಕೇಳಿ ಬಪ್ಪೆವನಿತು ಕಾಲ ಸೈರಿಸ:
ಗುರುದೇವನೇತಕೆ ನುಡಿದಿಲ್ಲವೊ"
ಎಂದು ಪೊರಮಡಲಾಶ್ರಮದಲಿ ಬಾಲ–
ಕರ ಕಾಣದಾತುರದಿಂದಲ್ಲಿಗೆ
ಜಾನಕಿಯು ಬರೆ ಲವಕುಶರೊಮ್ಮೆಗೆ
ಕೇಳಿದ"ರಾಂ ಸುತರೇ ರಾಮಗೆ"

೨೭

ರಾಜಮಂದಿರದಲ್ಲಿದ್ದ ಸ್ವರ್ಣದ
ಸೀತೆಯ ಕಂಡಿರ್ದ ಚಂದ್ರಕೇತು
ಒಮ್ಮೆಗಾಕೆಯ ಪ್ರತ್ಯಕ್ಷ ಕಂಡಡಿ–
ಗೆರಗಿದನಾಡದೆ ಮಾತು ಸೋತು
ಸೀತೆಗುಮ್ಮಳಸಂತಸದುಕ್ಕಿನಿಂ–
ದುಕ್ಕಿತು ಕಣ್ಣೀರು ಕೆಳಗುದುರಿ
ಬಾಲವೀರಗೆ ಗೆಲ್ಸೇಸೆಯಿಕ್ಕಿತು
ಕಂಠದ ಗದ್ಗದವಾಯ್ತು ಪರಿ

೨೮

“ಜನ್ಮ ಜಯಿಸಿದೆನಿಂದಿಗೆ ಶ್ರೀರಾಮ-
ದೇವರ ದಯೆಯೆನ್ನ ಮೇಲೆತ್ತಿತು
ದುಃಖಸಾಗರದಲಿ ಮುಳುಗಿವ ರಾಮ-
ಸವತೆಯ ಕಂಡಾಗ ಮನಕುಗ್ಗಿತು
ನಿಮ್ಮ ದರ್ಶನಲಾಭವೆ ಚಿತ್ತವ-
ನರಳಿಸಿ ಸೊಗವಿತ್ತು ಕೈಗೊಟ್ಟಿತು
ಬನ್ನಿ ದೇವರ ಹೃದಯದ ಕತ್ತಲೆ
ಕಳೆಯಿರಿ ಜನ್ಮಕ್ಕೆ ಫಲ ಸಿಕ್ಕಿತು”.

೨೯

ಚಂದ್ರಕೇತುವಿನೊರೆದ ಮಾತಿನ ಮುತ್ತು
ಸೀತೆಯೆದೆಯನೇರಲಾನಂದದ
ಫೇನದಂತೆಳನಗು ಮುಗುಳಿತು ಮರು-
ಗಳಿಗೆಯೊಳೌರ್ವಾಗ್ನಿ ಸಿಡಿದಂದದ
ತಾಪವುಕ್ಕಿತು ಮುಖಕಾಂತಿ ಮುಸುಳಲ್ಕೆ
ಕೊರಳೊಲೆಯಿತು ಬೆಂದ ಕಮಲದಂತೆ
ಹಿಂದುಮುಂದೆಳೆಯಿತು ಬಗೆ ನೀರನಾ-
ಸರಿಗೊಳ್ಳಬಹುದೊ ಎಂದೆನ್ನುವಂತೆ

೩೦

ದಿವ್ಯಲೋಚನವಾಲ್ಮೀಕಿಯೆದೆಗಣ್ಣಿ-
ಗೀಸ್ಥಿತಿ ಕಾಣಿಕೆಯಾಗೆ ಸೊಗ-
ವಾದಲಿಡೆಯಾದುದೆನ್ನುವ ಮುನ್ನೋಟ-
ದಿಂದಲ್ಲಿ ಬಂದನು ನೆರವಿಯಾಗ
ಬಂದು ಮಣಿದುದು ಕೈಯೆತ್ತಿ ಹರಸಿದ-
ನೆಲ್ಲರ ಜಾನಕಿಲವಕುಶರ
ಸಂತವಿಸಿ “ಬಂತು ಭಾಗ್ಯದ ಕಾಲವು
ನಿಮಗಿಂದು ರಾಮನ ವರದ ಕರ”

೩೧

ಎನ್ನುತಿರಲತ್ತ ಪಾಳಯದಲಿ ಲವ-
ಣಾಂತಕನರುಣೋದಯದ ಕಾಲಕೆ
ಹೋದನೆಲ್ಲಿಗೆ ಚಂದ್ರಪತಾಕನು
ಹುಡುಕುವೆನೆನ್ನುತ್ತ ಬರೆ ಮುಂದಕೆ
ದೂರದಲಿ ಕೆಲಮಂದಿಗಳೊಟ್ಟಾಗಿ
ನಿಂತಂತೆ ಕಂಡಿತು ಮರಗಳೆಡೆ
ಕಣ್ಣನರಳಿಸಿ ಮುಂಬರಿದಂದಲ್ಲಿ
ಕಂಡನು ಬಾಲನ ರಿಪುಗಳೆಡೆ

೩೨

ಸಿಟ್ಟಿನುರಿಯಿಂದ ವೇಗದಿಂದೈತಂದ
ಶತ್ರುಘ್ನನಾತನ "ಸೂರ್ಯವಂಶ
ಕೇತುವಪ್ಪೈಯ ಕೊಡಲಿಯ ಕಾವಂತೆ
ಬಾಲಿಶತನದಿಂದ ಸರ್ವನಾಶ"
ಎಂದು ಗರ್ಜಿಸಿ ಬರುತಿರೆ ಸೀತೆಯು
ದರ್ಶನವಾದುದು ಸಂಭ್ರಮದಿ
ಸ್ವಪ್ನವೇನಿದು ಸತ್ಯವೊ ತಿಳಿಯದೆ
ಬೆಬ್ಬಳದಿಂ ಮಣಿದನು ಪದದಿ

೩೩

ಅಷ್ಟರೊಳು ದಾಶರಥಿಯ ಪತಾಕಿನಿ
ಸೇರಿತು ಸುತ್ತಲು ಜಲಧಿಯಂತೆ
ವಾನರರ ಚೂಣಿ ನೆಗೆಯಿತು ತೆರೆಯಂತೆ
ಕಿರಿಚಿತು ಸಾಗರ ಮೊರೆಯುವಂತೆ
ಜಾನಕಿಯ ಕಂಡು ತುಂಬಿದಾನಂದದಿಂ--
ದಣುವನು ನೆಗೆದನು ಸಾಕೇತಕೆ
ಕ್ಷಿಪ್ರದಲಿ ಮರಳಿದು ಸೀತೆಗಿತ್ತನು
ಶ್ರೀರಾಮದೇವರ ಹೊಸಕಾಣಿಕೆ

೩೪

ಮಾತುಬಾರದ ಮಾತಾಡಲಾರಾಮ-
ಪದವೆಲ್ಲರಂತರವನು ನಾಟಿತು
ವರ್ತಮಾನದ ಸ್ಥಿತಿಯಿಂದ ಭೂತದ-
ಗುರ್ವಿನ ರೂಪವ ನೆರೆ ನೋಡಿತು
ಭಾವಿಯನು ಕಾಣದಿರೆ ಕವಿಮನವನ್ನು
ಕೆಣಕಿತು ವಾಲ್ಮೀಕಿ ನಗುಮೊಗದಿ
ಪೇಳ್ದನಿಂದಿಗೆ ಹಿಂದುಮುಂದನು ಕೂಡಿ
ಸತ್ಯದ ಧರ್ಮವನೀ ತೆರದಿ

೩೫

"ಧರ್ಮಕರ್ಮದ ಸಂಧಿಕಾಲದೊಳಿಂತು
ಕೆಡುನುಡಿಗರ್ಧಾಂಗಿಯನು ತೊರೆವ
ಕಾರ್ಯವಪ್ಪುದು ದಿಟ ಹೊಸನೀತಿಯ-
ನಚ್ಚೊತ್ತಲವಕಾಶವೀ ಪರಿಯ
ಲೋಕಧರ್ಮಕ್ಕೆ ನೆಲೆಯಿಲ್ಲ ನೂತನ-
ಪಂಥವ ಪಿಡಿವುದೆ ಸತ್ಕರ್ಮವು
ಎಂಬ ತತ್ವದ ಸತ್ಯವನರಿಯಲು
ಮಾನುಷತೆಗೆ ನೆಲೆ ಸುಸ್ಥಿರವು"

೩೬

ರಾಮಹೃದಯಕ್ಕೆ ಪ್ರಜೆಯಂತರಂಗಕ್ಕೆ
ಸದ್ಬೋಧೆ ನಾಂಟಿತ್ತು ಸೊಗ ನೆಲಸೆ
ಸೀತಾರಾಮರನೊಂದುಗೂಡಿಸಿ ನೆರೆ
ಮೆರೆಯಿತು ಸೌಭಾಗ್ಯಶ್ರೀಯುದಿಸೆ
ಚಂದ್ರಕೇತುವಿನಳ್ತಿಯ ನುಡಿಯಿಂತು
ಹಯಮೇಧಪುಣ್ಯವನೊದಗಿಸಿತು
ಪಾಪವಾರಿತು ಜಾನಕಿಲವಕುಶ-
ರಾರಾಮಪದಸೇರೆ ಮುದವೇರಿತು

---

ಪುರಾಣಾಕ್ಷಗಾರಿ

ಆರಾಣೆ.